146ನಿಯಮಕ್ಕೆ ನಿ-330
ಕ್ರ-87 ಕಳುಹಿಸಿ

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ-330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ**

**ವಿಷಯ**

ಶ್ರೀ ಕೆ.ವೆಂಕಟಪತೆಪ್ಪ, ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಚಿಕ್ಕಬಳ್ಳಾಪುರ ಈ ಕಾಲೇಜು 1983 ರಲ್ಲಿ ಪ್ರಾರಂಭಗೊಂಡು ಸತತವಾಗಿ ನಡೆಯುತ್ತಾ ಬಂದಿದೆ. ಈ ಸಂಸ್ಥೆಯು NAAC ಸಂಸ್ಥೆಯಿಂದ Accredation ಪಡೆದಿದ್ದು, ಹಾಗೂ ಬೆಂಗಳೂರು ಉತ್ತರ ವಿಶ್ವ ವಿದ್ಯಾಲಯದಿಂದ ಶಾಶ್ವತ ಸಂಯೋಜನೆಗೆ ಒಳಪಡಿಸಲಾಗಿದೆ. UGC ಸಂಸ್ಥೆಯ ವತಿಯಿಂದ 2(F) 12 (B) ಮಾನ್ಯತೆಯನ್ನು ಸಹ ಪಡೆದಿರುತ್ತದೆ. ಈ ಸಂಸ್ಥೆಯನ್ನು ದಿನಾಂಕ: 09.12.2016 ರ ಸರ್ಕಾರದ ಆದೇಶ ಸಂಖ್ಯೆ: ಇಡಿ 141 ಯುಆರ್‌ಸಿ 2015, ಬೆಂಗಳೂರು, ದಿನಾಂಕ: 09.12.2016 ರಂತೆ ವೇತನಾನುದಾನಕ್ಕೆ ಒಳಪಡಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 411 ಯುಆರ್‌ಸಿ 2018, ಬೆಂಗಳೂರು ದಿನಾಂಕ: 18.10.2019 ರನ್ವಯ ಈ ಕಾಲೇಜಿನ ಬೋಧಕ/ ಬೋಧಕೇತರ 23 ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶವಿದೆ. ಆದರೆ ಅದರಲ್ಲಿ 01 ಬೋಧಕ ಹುದ್ದೆ, 01 ಗ್ರಂಥಪಾಲಕರು, 01 ಪ್ರಥಮ ದರ್ಜೆ ಸಹಾಯಕರ ಒಟ್ಟು 03 ಹುದ್ದೆಗಳನ್ನು ಮಾತ್ರ ವೇತನಾನುದಾನಕ್ಕೆ ಒಳಪಡಿಸಿದ್ದು, ಉಳಿದ 20 ಹುದ್ದೆಗಳನ್ನು ವೇತನಾನುದಾನಕ್ಕೊಳಪಡಿಸಲು ವಿನಾ ಕಾರಣ ಆಕ್ಷೇಪಣೆಗಳನ್ನು ಸಲ್ಲಿಸುತ್ತಿದ್ದು ಬಾಕಿ ಉಳಿದಿರುವ ಎಲ್ಲಾ 20 ಹುದ್ದೆಗಳನ್ನು ವೇತನಾನುದಾನಕ್ಕೊಳಪಡಿಸುವ ಕುರಿತು.

**ಉತ್ತರ**

ಸರ್ಕಾರದ ಆದೇಶ ಸಂಖ್ಯೆ: ಇಡಿ 141 ಯುಆರ್‌ಸಿ 2015, ದಿನಾಂಕ: 09.12.2016 ರಲ್ಲಿ ಚಿಕ್ಕಬಳ್ಳಾಪುರ ಶ್ರೀ ವೆಂಕಟಪತೆಪ್ಪ ದೈಹಿಕ ಶಿಕ್ಷಣ ಮಹಾವಿದ್ಯಾಲಯವನ್ನು ಯುಜಿಸಿ ಮತ್ತು ಎನ್.ಸಿ.ಟಿ.ಇ ನಿಯಮಾವಳಿಗಳು 1997 ಮತ್ತು 2014 ರಲ್ಲಿ ನೀಡಿರುವ ಸಿಬ್ಬಂದಿ ರೂಪಿಕೆಯ ಮಾರ್ಗಸೂಚಿಯನ್ವಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಳವಡಿಸಿಕೊಂಡಿರುವ ಸಿಬ್ಬಂದಿ ರೂಪಿಕೆ ನಿಯಮಗಳನ್ವಯ ಕಾಲೇಜನ್ನು ವೇತನಾನುದಾನಕ್ಕೆ ಒಳಪಡಿಸಿ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

ಸದರಿ ಕಾಲೇಜಿನಲ್ಲಿ 2017-2018 ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ 40 ಇದ್ದು, ಎನ್.ಸಿ.ಟಿ.ಇ ನಿಗಧಿಪಡಿಸಿರುವ ವಿದ್ಯಾರ್ಥಿಗಳ ಸಂಖ್ಯೆ 100 ಅನ್ನು ಒಳಗೊಂಡಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ: ಇಡಿ 141 ಯುಆರ್‌ಸಿ 2015, ದಿನಾಂಕ: 09.12.2016 ರಲ್ಲಿ ಮಂಜೂರಾಗಿರುವ ಬೋಧಕ/ಬೋಧಕೇತರ/ತಾಂತ್ರಿಕ ಹುದ್ದೆಗಳಿಗೆ ಎನ್.ಸಿ.ಟಿ.ಇ ನಿಗಧಿಪಡಿಸಿರುವ ಚಾಲ್ತಿಯಲ್ಲಿದ್ದ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಪರಿಶೀಲಿಸಿ, ಇಲಾಖೆಯ ಅಧಿಕಾರಿಗಳು ಕಾಲೇಜಿಗೆ ಭೇಟಿ ನೀಡಿ ತಪಾಸಣೆ ನಡೆಸಿ, ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ಹಾಗೂ ಹೆಚ್ಚುವರಿ ಬೋಧಕ/ಬೋಧಕೇತರ ಸಿಬ್ಬಂದಿಗಳ ಮಾಹಿತಿಯನ್ನು ಸಿದ್ಧಪಡಿಸಿ, ವೇತನಾನುದಾನಕ್ಕೆ ಒಳಪಡಿಸುವ ಕುರಿತು ಆಯುಕ್ತರು ನೀಡಿದ್ದ ವರದಿಯನ್ನು ಪರಿಶೀಲಿಸಿ, ಆರ್ಥಿಕ ಇಲಾಖೆ ಸಹಮತಿಗೆ ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆ ನೀಡಿದ ಸಹಮತಿಯಂತೆ ಸರ್ಕಾರದ ಆದೇಶ ಸಂಖ್ಯೆ: ಇಡಿ 411 ಯುಆರ್‌ಸಿ 2018, ದಿನಾಂಕ: 18.10.2019 ರಲ್ಲಿ 01 ಬೋಧಕ ಮತ್ತು 02 ಬೋಧಕೇತರ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಲಾಗಿರುತ್ತದೆ.

ಸಂಖ್ಯೆ: ಇಡಿ 17 ಯುಜಿಹೆಚ್ 2022

**(ಡಾ: ಅಶ್ವಥ್ ನಾರಾಯಣ ಸಿ.ಎನ್)**
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.